# ನನ್ನ ಸ್ವಚ್ಛತಾ ಅಭಿಯಾನ...

ಬದಲಾವಣೆ ತನ್ನಿಂದಲೇ ಆರಂಭವಾಗಬೇಕು ಎಂದು ಸ್ವಚ್ಛತಾ ಅಭಿಯಾನ ಕೈಗೊಂಡಾಗ ಮೊದಲು ಆರಿಸಿಕೊಂಡಿದ್ದು ಟ್ಯಾಬ್ ಅನ್ನು. ಟ್ಯಾಬ್‌ನ ಕಸ ತೆಗೆಯುವ ಈ ಅಭಿಯಾನ ಯಶಸ್ವಿಯಾಯಿತೇ?

■ ಪ್ರೀತಿ ಎಮ್. ಸಂಗಮ್

ಸ್ವಚ್ಛತಾ ಅಭಿಯಾನದ ಬಗ್ಗೆ ಅಲ್ಲಲ್ಲಿ ಓದಿ, ಕೇಳಿ, ನೋಡಿ ನನಗೂ ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಬೇಕು ಅಂತ ಹೊಸ ಹುಳು ತಲೇಲಿ ಓಡಾಡ್ತಾ ಇತ್ತು. ಸಮಾಜದ ಉದ್ಧಾರ ಆಗಬೇಕು ಅಂದ್ರೆ ಅದು ನಮ್ಮಿಂದಲೇ ಶುರು ಆಗಬೇಕು ಅಲ್ವಾ, ಹಾಗಾಗಿ ಸ್ವಚ್ಛತಾ ಕೆಲಸ ನನ್ನ ವಸ್ತುವಿನಿಂದಲೇ ಶುರುವಾಗಲಿ ಅನಿಸ್ತು.

ಯಾವುದೇ ವಿಧಿ ಪ್ರಾರಂಭಿಸುವ ಮೊದಲು ಅದನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ದೇವರನ್ನು ಪ್ರಾರ್ಥಿಸುವುದು ರೂಢಿ. ಹಾಗಾಗಿ ನಾನು ಮನೆಯ ದೇವರನ್ನು, ಅಲ್ಲಲ್ಲ... ಮನದ ದೇವರಾದ ಟ್ಯಾಬ್ಲೆಟ್ ಅನ್ನು ಕರಗಳಲ್ಲಿ ಹಿಡಿದು, ಕಣ್ಣಿಗೊತ್ತಿಕೊಂಡು ಟ್ಯಾಬ್ಲೆಟ್ ಕಸ ತೆಗಿಯುವ ಕೆಲಸದಿಂದಲೇ ನಾಂದಿ ಹಾಡಿದೆ.

ಟ್ಯಾಬ್ಲೆಟ್ ಅಂದ್ರೆ ಅನಾಸಿನ್, ಕ್ರೋಸಿನ್, ಸಿಟ್ರಜಿನ್ ಅಲ್ಲ, ನಾನು ಕಸ ತೆಗೆಯೋಕೆ ಆರಿಸಿಕೊಂಡದ್ದು ಮಿನಿ ಲ್ಯಾಪ್‌ಟಾಪ್ ಅಥವಾ ಮ್ಯಾಕ್ಸಿ ಮೊಬೈಲ್ ಅಥವಾ ಇನ್ನೂ ಸಿಂಪಲ್ಲಾಗಿ ಹೇಳಬೇಕೆಂದ್ರೆ ಲ್ಯಾಪ್‌ಟಾಪ್‌ನ ಚಿಕ್ಕಮ್ಮನ್ನ. ಇದನ್ನ ಶಾರ್ಟ್ ಅಂಡ್ ಸ್ವೀಟಾಗಿ 'ಟ್ಯಾಬ್' ಎಂದು ಕರೆಯುತ್ತಾರೆ.

ಯಾವುದರ ಕಸ ತೆಗೆಯಬೇಕು ಅಂತ ಡಿಸೈಡ್ ಆದ ಮೇಲೆ ಯಾವುದರಿಂದ ಕಸ ತೆಗೆಯಬೇಕು ಎನ್ನುವುದು ಕೂಡ ಮುಖ್ಯವಾಗುತ್ತೆ ಅಲ್ವಾ? ಕಸ ತೆಗೆಯಬೇಕಾದ್ರೆ ಪೊರಕೆ ಬೇಕು, ಇಲ್ಲಾಂದ್ರೆ ವ್ಯಾಕ್ಯೂಮ್ ಕ್ಲೀನರ್ ಬೇಕು. ಅಷ್ಟೊಂದು ಕಾಸ್ಟ್ಲಿ ಟ್ಯಾಬ್ಲೆಟ್‌ನ ಹೇಗೆ ಪೊರಕೆ, ವ್ಯಾಕ್ಯೂಮ್ ಕ್ಲೀನರ್‌ನಿಂದ ಸ್ವಚ್ಛ ಮಾಡ್ತಿರಬಹುದು ಅಂತ ತಲೆ ಕೆಡಿಸ್ಕೊಬೇಡಿ. ನಾನು ಹೇಳ್ತಿರೋದು ಪೊರಕೆ, ವ್ಯಾಕ್ಯೂಮ್ ಕ್ಲೀನರ್‌ನಂತೆಯೇ ಕೆಲಸ ಮಾಡುವ ನನ್ನ ಬೆರಳು ಮತ್ತು ಸ್ಟೈಲಸ್ ಪೆನ್ ಬಗ್ಗೆ.

ಪಾಪ, ಕೋಮಲ ಬೆರಳುಗಳಿಗೆ ಯಾಕೆ ಕ್ಲೀನ್ ಮಾಡೋ ಕಷ್ಟ ಕೊಡೋದು ಅಂತ ಸ್ಟೈಲಸ್ ಪೆನ್ ಹುಡುಕಾಡಿದೆ. ಮನೆಯೆಲ್ಲ ಹುಡುಕಾಡಿದೆ. ಊಹೂಂ... ಎಷ್ಟು ಹುಡುಕಿದರೂ ಸಿಗಲಿಲ್ಲ. ಹುಡುಕಿ ಹುಡುಕಿ ಸುಸ್ತಾದ ಮೇಲೆ ಗೊತ್ತಾಗಿದ್ದು, ಗಡಿಬಿಡಿಯಲ್ಲಿ ನನ್ನ ಮಗ ಪೆನ್ ಅನ್ಕೊಂಡು ಸ್ಟೈಲಸ್ ಅನ್ನೇ ಕಂಪಾಸ್ ಬಾಕ್ಸ್‌ನಲ್ಲಿ ಇಟ್ಕೊಂಡು ಶಾಲೆಗೆ ಒಯ್ದದ್ದು ಅಂತ. ಇನ್ನು ಬೇರೆ ಸಾಧನದಿಂದ ಸ್ವಚ್ಛ ಮಾಡಲು ಸಾಧ್ಯವಿಲ್ಲವೆಂದು ನನ್ನ ಬೆರಳುಗಳೆಂಬ ಪೊರಕೆಯಿಂದಲೇ ಸ್ವಚ್ಛತಾ ಕಾರ್ಯ ಇನ್ನೇನು ಶುರು ಮಾಡ್ಬೇಕು ಅನ್ನುವಷ್ಟರಲ್ಲಿ ಮನೆ ಕೆಲಸದಾಕೆ ಬಂದು 'ಏನ್ ಮಾಡ್ತಿದ್ದೀರಕ್ಕಾ' ಎಂದು ಕೇಳಿದಳು.

'ನೀನು ಮನೆ ಕಸ ತೆಗೀತಾ ಇದ್ದಿ, ನಾನು ಈ ಟ್ಯಾಬ್ ಕಸ ತೆಗೀತಾ ಇದ್ದೀನಿ' ಎಂದೆ. ಅಷ್ಟಕ್ಕೆ ಅವಳು 'ಅಕ್ಕಾ, ಈಗಷ್ಟೇ ಕಸ ಗುಡಿಸಿ ಒರೆಸಿದಿನಿ. ಕಸ ಕೆಳಗೆ ಹಾಕಬೇಡಿ, ಸ್ವಚ್ಛಗೊಳಿಸಿದ ಮೇಲೆ ಕಸ ಇದರಲ್ಲಿ ಹಾಕಿ' ಅಂತ ನನ್ನ ಮುಂದೆ ಡ್ರೈ ವೇಸ್ಟ್‌ನ ದೊಡ್ಡ ಡಸ್ಟ್‌ಬಿನ್ ತಂದಿಟ್ಟಳು.

ಇದನ್ನು ನೋಡಿ ತುಟಿಯಂಚಿನವರೆಗೂ ಉಕ್ಕಿ ಬಂದ ನಗು ಅದುಮಿಕೊಂಡು, 'ನೀನೇನು ಚಿಂತೆ ಮಾಡ್ಬೇಡ, ಟ್ಯಾಬ್‌ನಲ್ಲಿಯೇ ಒಂದು ಡಸ್ಟ್‌ಬಿನ್ (ರಿಸೈಕಲ್ ಬಿನ್) ಇಟ್ಟಿರ್ತಾರೆ, ಅದರಲ್ಲೇ ಕಸ ಹಾಕ್ತೀನಿ' ಅಂದೆ. ಆಯ್ತುಕ್ಕ ಅಂತ ತಂದಿಟ್ಟ ಡಸ್ಟ್‌ಬಿನ್ ವಾಪಸ್ ತೆಗೆದುಕೊಂಡು ಹೋದಳು. ಕೆಲಸ ಮುಗಿಸಿ ಹೊರಡುವಾಗ, 'ಅಕ್ಕಾ, ಆ ಟ್ಯಾಬ್‌ನಲ್ಲಿ ಒಂದು ಡಸ್ಟ್ ಬಿನ್ ಇದೆ ಅಂದ್ರಲ್ಲಾ, ಕೊಡಿ ಅದನ್ನ, ಮನೆ ಕಸದ ಜೊತೆ ನಿಮ್ಮ ಟ್ಯಾಬ್ ಕಸಾನೂ ಚೆಲ್ಲಿ ಬರ್ತೀನಿ' ಅನ್ನೋದಾ?

ಮತ್ತೊಮ್ಮೆ ಉಕ್ಕುತ್ತಿರುವ ನನ್ನ ನಗೆಗೆ ಬ್ರೇಕ್ ಹಾಕಿ 'ಬೇಡ ಅದೊಂಥರಾ ಅಕ್ಷಯಪಾತ್ರೆ ಇದ್ದ ಹಾಗೆ, ಅದರಲ್ಲಿ ಎಷ್ಟು ಕಸ ಹಾಕಿದ್ರೂ ತುಂಬೋದಿಲ್ಲ, ವಾಸನೆ ಕೂಡ ಬರೋದಿಲ್ಲ. ನಾನು ಖಾಲಿ ಮಾಡದಿದ್ದರೂ ಒಂದು ತಿಂಗಳಾದ ಮೇಲೆ ತನ್ನಷ್ಟಕ್ಕೆ ತಾನೇ ಖಾಲಿಯಾಗುತ್ತೆ. ಅಷ್ಟೇ ಅಲ್ಲ, ಒಮ್ಮೆ ಕಸಕ್ಕೆ ಹಾಕಿದ್ದು ನನಗೆ ಮತ್ತೆ ಬೇಕೆನಿಸಿದರೆ ಒಂದು ತಿಂಗಳ ಅವಧಿಯಲ್ಲಿ ಆ ಡಸ್ಟ್‌ಬಿನ್‌ನಿಂದ ವಾಪಸ್ ತೆಗೆದುಕೊಳ್ಳಬಹುದು. ಗಲೀಜು ಕೂಡ ಆಗಿರೋದಿಲ್ಲ, ಹಾಗಾಗಿ ತೊಳೆಯುವುದು ಬೇಕಾಗಿಲ್ಲ' ಅಂದೆ.

ಅವಳು ಅಚ್ಚರಿಯಿಂದ, 'ಹೌದಾ ಅಕ್ಕಾ! ಹಾಗಾದ್ರೆ ಮನೆಗೂ ಅಂಥದ್ದೊಂದು ಡಸ್ಟ್‌ಬಿನ್ ಆರ್ಡರ್ ಮಾಡಿ, ದಿನಾಲೂ ಕಸ ತೆಗೆದುಕೊಂಡು ಹೋಗೋದು ತಪ್ಪುತ್ತೆ ನನಗೆ. ಅಷ್ಟೇ ಅಲ್ಲ, ಮೊನ್ನೆ ನಿಮ್ಮ ಮಗ ಹೊಸ ಚಾಕು ಡಸ್ಟ್‌ಬಿನ್‌ನಲ್ಲಿ ಹಾಕಿದ್ದ. ಗಲೀಜು ಆಗಿರುತ್ತೆ ಅಂತ ನೀವು ವಾಪಸ್ ತೆಗೆದ್ಕೊಳ್ಳಿಲ್ಲ, ನೀವು ಹೇಳ್ತಿರೋ ಡಸ್ಟ್‌ಬಿನ್ ಇದ್ದಿದ್ದರೆ ಚಾಕು ವಾಪಸ್ ತೆಗೆದ್ಕೋಬಹುದಿತ್ತು' ಅಂತ ಅಂದಾಗ 'ಆಯ್ತು ಮಾರಾಯ್ತಿ ನಿನ್ನ ಕೆಲಸ ತಪ್ಪಿಸಿಕೊಳ್ಳಲು ಮನೆ ಕಸ ತಂದು ನನ್ನ ಟ್ಯಾಬ್ ಡಸ್ಟ್‌ಬಿನ್‌ನಲ್ಲಿ ಹಾಕಬೇಡ ಮತ್ತೆ' ಎಂದು ನಕ್ಕೆ.



ಇಷ್ಟು ಆಯ್ತಾ, ಮತ್ತೆ ಕೆಲಸ ಮುಂದುವರೆಸಿದೆ. ಯಾವ ಯಾವ ರೂಂನಲ್ಲಿ ಎಷ್ಟೆಷ್ಟು ಕಸ ಇದೆ ಅಂತ ಫೈಲ್ ಮ್ಯಾನೇಜರ್ ಎಂಬ ಫೋಲ್ಡರ್‌ನಲ್ಲಿ ನಿಂತು ದೃಷ್ಟಿ ಹರಿಸಿದೆ. ಅಬ್ಬಬ್ಬಾ! ಎಲ್ಲಿಂದ ಶುರು ಮಾಡೋದು? ಎಲ್ಲ ರೂಂಗಳಲ್ಲಿ ರಾಶಿ ರಾಶಿ ಕಸ. ಫೋಟೋಸ್ ಎಂಬ ಫ್ಯಾಮಿಲಿ ರೂಂ, ಆಡಿಯೋಸ್ ಎಂಬ ಅಡುಗೆ ಮನೆ, ಡೌನ್‌ಲೋಡ್ಸ್ ಎಂಬ ಡೈನಿಂಗ್ ರೂಂ, ವಿಡಿಯೋಸ್ ಮತ್ತು ವಾಟ್ಸಾಪ್ ಎಂಬ ವಾರ್ಡ್ರೋಬ್... ಒಂದೇ ಎರಡೇ.

ಗೆಸ್ಟ್‌ಗಳು ಬಂದ ತಕ್ಷಣ ಕಾಣಿಸೋದು ಫ್ಯಾಮಿಲಿ ರೂಂ ಅಥವಾ ಲಿವಿಂಗ್ ರೂಂ ಅಲ್ವಾ? ಹಾಗಾಗಿ ಸ್ವಚ್ಛತಾ ಅಭಿಯಾನ ಅಲ್ಲಿಂದಲೇ ಶುರು ಮಾಡಿದೆ. ಸೆಲ್ಫೀ ಫೋಟೋಗಳು, ಬೇರೆಯವರು ಕ್ಲಿಕ್ಕಿಸಿದ ನನ್ನ ಫೋಟೋಗಳು, ಮತ್ತಿತರ ಫೋಟೋಗಳು,